# 5ನೇ ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ ಕನ್ನಡ ಸಮ್ಮೇಳನ 2021

## ಮಾನವ ಸಂಪನ್ಮೂಲ ಕ್ಷೇತ್ರದ ಹಿರಿಯ ಸಾಧಕ ಪ್ರಶಸ್ತಿ - 2021



## ಶ್ರೀಯುತ ಸಿ.ಕೆ. ದೇವಪ್ಪ ಗೌಡ ರವರ ಪ್ರಶಸ್ತಿ ಪತ್ರ

ತಮ್ಮ ಗಡುಸಾದ ಧ್ವನಿಯ ಮೂಲಕ, ಮೊದಲ ಸಂಭಾಷಣೆಯಲ್ಲಿಯೇ ವ್ಯಕ್ತಿಗಳ ಮೇಲೆ ಅಗಾಧವಾದ ಪ್ರಭಾವ ಬೀರುವ ಶಕ್ತಿಯನ್ನು ಹೊಂದಿರುವ
ಹಾಗೂ ಕಾರ್ಮಿಕ ಕಾನೂನುಗಳ ವಿಶ್ವಕೋಶ ಎನ್ನಬಹುದಾದ ಜ್ಞಾನವುಳ್ಳ ಮೇರು ವ್ಯಕ್ತಿತ್ವದ ಮಹನೀಯರು,
ನಮ್ಮ ಹಿರಿಯ ಮಾನವ ಸಂಪನ್ಮೂಲ ವೃತ್ತಿನಿರತರು ಮತ್ತು ವಕೀಲರಾದ ಶ್ರೀಯುತ ಸಿ.ಕೆ. ದೇವಪ್ಪ ಗೌಡ.

ಕರ್ನಾಟಕದ ಶೃಂಗೇರಿ ಸಮೀಪದ ಪುಟ್ಟ ಹಳ್ಳಿಯೊಂದರಲ್ಲಿ ಜನಿಸಿದ ದೇವಪ್ಪ ಗೌಡರವರಿಗೆ ಮೂವರು ಸಹೋದರರು ಮತ್ತು ಮೂವರು ಸಹೋದರಿಯರು, ಕೃಷಿ ಕುಟುಂಬದ ಶ್ರೀಯುತ ಕಾಡಪ್ಪ ಗೌಡ ಮತ್ತು ಶ್ರೀಮತಿ ಶೇಷಮ್ಮ ದಂಪತಿಗಳಿಗೆ ಜನಿಸಿದ ಶ್ರೀಯುತರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ತಮ್ಮ ಹುಟ್ಟೂರಿನಲ್ಲಿ ಮತ್ತು ಕಾಲೇಜು ಶಿಕ್ಷಣವನ್ನು ಶಿವಮೊಗ್ಗದಲ್ಲಿ ಪಡೆದರು. ಶ್ರೀಯುತರು ವಿಜ್ಞಾನ ವಿಷಯದಲ್ಲಿ ಬ್ಯಾಚುಲರ್ ಪದವಿ ಮತ್ತು ಬ್ಯಾಚುಲರ್ ಆಫ್ ಲಾ ಪದವಿಗಳನ್ನು ಪಡೆದಿದ್ದಾರೆ ಹಾಗೂ ಬೆಂಗಳೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸ್‌ನಿಂದ ಸಮಾಜ ಸೇವಾ ಆಡಳಿತದಲ್ಲಿ ಡಿಪ್ಲೊಮಾವನ್ನು ತಮ್ಮದಾಗಿಸಿಕೊಂಡಿದ್ದಾರೆ. ಇದರೊಂದಿಗೆ ಶ್ರೀಯುತರು ಲಂಡನ್‌ನ ಪ್ರತಿಷ್ಠಿತ ಸಂಸ್ಥೆಯಾದ ಯುರೋಮನಿ ಲರ್ನಿಂಗ್ ಇನ್‌ಸ್ಟಿಟ್ಯೂಟ್‌ನಿಂದ ಮಾನವ ಸಂಪನ್ಮೂಲ ಕೋರ್ಸ್‌ಅನ್ನು ತಮ್ಮ ಜ್ಞಾನ ತೆಕ್ಕೆಗೆ ಸೇರಿಸಿದ್ದಾರೆ.

ಶ್ರೀಯುತರು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದ ನಂತರ, ವಕೀಲರಾಗಿ ಶಿವಮೊಗ್ಗದಲ್ಲಿ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು. ನಂತರ ಸುಮಾರು 5 ವರ್ಷಗಳ ಕಾಲ ಕೆಮಿಕಲ್ಸ್ ಮತ್ತು ಟೆಕ್ಸ್‌ಟೈಲ್ ಮ್ಯಾನುಫ್ಯಾಕ್ಚರಿಂಗ್ ಕಾರ್ಖಾನೆಗಳಲ್ಲಿ ಸಿಬ್ಬಂದಿ ಮತ್ತು ಕಾರ್ಮಿಕ ಅಧಿಕಾರಿಯಾಗಿ ಕೆಲಸ ನಿರ್ವಹಿಸಿದರು. 1973ನೇ ವರುಷದಲ್ಲಿ ಸಾರ್ವಜನಿಕ ವಲಯದ ಅತಿದೊಡ್ಡ ಬ್ಯಾಂಕ್ ಆದ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿ ಸಿಬ್ಬಂದಿ ಅಧಿಕಾರಿಯಾಗಿ ಉದ್ಯೋಗವನ್ನು ಪಡೆದರು. ಪ್ರಾರಂಭದಲ್ಲಿ ಚೆನ್ನೈ ಶಾಖೆಯಲ್ಲಿ ಕೆಲಸ ಶುರುಮಾಡಿದ ಶ್ರೀಯುತರು ನಂತರದ ದಿನಗಳಲ್ಲಿ ಅಹಮದಾಬಾದ್, ದೆಹಲಿ, ಕೋಲ್ಕತ್ತಾ ಮತ್ತು ಬೆಂಗಳೂರು ಶಾಖೆಗಳಲ್ಲಿ ವಿಭಿನ್ನ ಹುದ್ದೆಗಳನ್ನು ಯಶಸ್ವಿಯಾಗಿ ನಿಭಾಯಿಸಿದರು. ಈ ಅವಧಿಯಲ್ಲಿ ಮಾನವ ಸಂಪನ್ಮೂಲ ನಿರ್ವಹಣೆ, ಔದ್ಯೋಗಿಕ ಸಂಬಂಧಗಳು, ಆಡಳಿತ ಮೇಲ್ವಿಚಾರಣೆ, ತಪಾಸಣೆ  ತಂಡ ನಿರ್ವಹಣೆ, ಶಾಖೆ ನಿರ್ವಹಣೆ ಮತ್ತು ಕಾನೂನು ಕಾರ್ಯಕ್ಷೇತ್ರಗಳಲ್ಲಿ ಅಪಾರವಾದ ಕೊಡುಗೆಗಳನ್ನು ನೀಡುತ್ತಾ ಪರಿಪಕ್ವತೆಯ ಅನುಭವವನ್ನು ತಮ್ಮದಾಗಿಸಿಕೊಂಡರು.

ಸುಮಾರು 30 ವರ್ಷಗಳ ಸೇವೆಯ ನಂತರ ಜನವರಿ 31, 2003 ರಂದು, ಶ್ರೀಯುತರು ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ ದೆಹಲಿ ಕಾರ್ಪೊರೇಟ್ ಕಛೇರಿಯಿಂದ ಮಾನವ ಸಂಪನ್ಮೂಲ ವಿಭಾಗದ ಉಪ ಪ್ರಧಾನ ವ್ಯವಸ್ಥಾಪಕರಾಗಿ ನಿವೃತ್ತರಾದರು.

ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ ಸೇವಾವಧಿಯಲ್ಲಿ, ಶ್ರೀಯುತರು ಇಂಡಿಯನ್ ಬ್ಯಾಂಕ್ ಅಸೋಸಿಯೇಷನ್‌ನ ಸಿಬ್ಬಂದಿ ಸಮಿತಿಯ ಸದಸ್ಯರಾಗಿದ್ದರು. ಸೇವೆಯ ನಿವೃತ್ತಿಯ ನಂತರ ಶ್ರೀಯುತರು ಅಕ್ಟೋಬರ್ 2003 ರಂದು ಬಿಸಿಪಿ ಅಸೋಸಿಯೇಟ್ಸ್‌ನಲ್ಲಿ ಕಾರ್ಮಿಕ ಕಾನೂನು ತಜ್ಞರಾಗಿ ಮತ್ತು ವಕೀಲರಾಗಿ, ಶ್ರೀಯುತ ಬಿ.ಸಿ.ಪ್ರಭಾಕರ್ ಅವರ ಮಾರ್ಗದರ್ಶನ ಮತ್ತು ನಾಯಕತ್ವದಲ್ಲಿ ಕಾರ್ಖಾನೆಗಳಿಗೆ ಮತ್ತು ಮಾನವ ಸಂಪನ್ಮೂಲ ವೃತ್ತಿನಿರತರಿಗೆ ತಮ್ಮ ಸೇವೆಗಳನ್ನು ಯಶಸ್ವಿಯಾಗಿ ನೀಡುತ್ತಾ ಮುಂದುವರಿಯುತ್ತಿದ್ದಾರೆ.

ಶ್ರೀಯುತರ ಜ್ಞಾನ ಸಂಪತ್ತು ಅಪಾರ. ಇವರು ಮಾನವ ಸಂಪನ್ಮೂಲ ನಿರ್ವಹಣೆಯ ಎಲ್ಲಾ ಕ್ಷೇತ್ರಗಳಲ್ಲಿ ಪರಿಣತಿಯನ್ನು ಪಡೆದು, ಐಡಿ ಆಕ್ಟ್‌ನ ಅಡಿಯಲ್ಲಿ ಕಾರ್ಖಾನೆಗಳಿಗೆ ಬೇಕಾಗಿರುವ ಎಲ್ಲಾ ರೀತಿಯ ಕಾನೂನಾತ್ಮಕ ಸಲಹೆಗಳನ್ನು ನೀಡುವಲ್ಲಿ ಪರಿಣಿತರು. ಇದರೊಂದಿಗೆ ವಕೀಲರಾಗಿ ವಿವಿಧ ಕಾರ್ಮಿಕ ಕಾನೂನುಗಳ ಅಡಿಯಲ್ಲಿ ನ್ಯಾಯಾಲಯಗಳು, ನ್ಯಾಯ ಮಂಡಳಿಗಳು ಮತ್ತು ಪ್ರಾಧಿಕಾರಗಳ ಮುಂದೆ ಸಂಸ್ಥೆಗಳ ಪರವಾಗಿ ಹಾಜರಾಗುವುದರ ಮೂಲಕ ಅತ್ಯುತ್ತಮವಾಗಿ ವಿವಾದಗಳನ್ನು ನಿಭಾಯಿಸುತ್ತಾರೆ.

ಶ್ರೀಯುತ ಸಿ.ಕೆ. ದೇವಪ್ಪ ಗೌಡ ಅವರು ತಮ್ಮ ಪತ್ನಿಯೊಂದಿಗೆ ಬೆಂಗಳೂರಿನಲ್ಲಿ ವಾಸಿಸುತ್ತಾ, ಉತ್ತಮ ಮೌಲ್ಯಾಧಾರಿತ ಜೀವನವನ್ನು ರೂಪಿಸಿಕೊಂಡಿದ್ದಾರೆ. ಅವರ ಒಬ್ಬ ಮಗಳು ಡಯೆಟಿಷಿಯನ್ ಅಗಿ ಮತ್ತೊಬ್ಬರು ಚಾರ್ಟೆಡ್ ಅಕೌಂಟೆಂಟ್ ಆಗಿ ಬೆಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಮಾನವ ಸಂಪನ್ಮೂಲ ನಿರ್ವಹಣೆ, ಔದ್ಯೋಗಿಕ ಸಂಬಂಧಗಳು ಮತ್ತು ಕಾನೂನು ಸಲಹೆಗಾರರಾಗಿ ಒಟ್ಟಾರೆ ಸುಮಾರು 5 ದಶಕಗಳಿಗಿಂತ ಹೆಚ್ಚಿನ ಅನುಭವವನ್ನು ಪಡೆದಿರುವ ಶ್ರೀಯುತ ದೇವಪ್ಪ ಗೌಡ ಅವರು ಅಜಾತ ಶತ್ರು, ಸೃಜನಶೀಲ, ಶ್ರದ್ಧೆಯುಳ್ಳ, ವಿನಮ್ರ ಮತ್ತು ವಿಶ್ವಾಸಾರ್ಹ ವೃತ್ತಿಪರರು. ಈ ಮಹನೀಯರ ಹೆಸರು ತಿಳಿಯದ ಮಾನವ ಸಂಪನ್ಮೂಲ ವೃತ್ತಿನಿರತರನ್ನು ಹುಡುಕುವುದು ನಿಜಕ್ಕೂ ಕಷ್ಟ. ಕರ್ನಾಟಕ ಉದ್ಯೋಗದಾತರ ಸಂಘದ ಮೂಲಕ ಆಯೋಜಿಸುವ ಹಲವಾರು ತರಬೇತಿಗಳಲ್ಲಿ ಪ್ರಮುಖ ಸಂಪನ್ಮೂಲ ವ್ಯಕ್ತಿಯಾಗಿ ತಮ್ಮ ಜ್ಞಾನವನ್ನು ಇತರರೊಂದಿಗೆ ಸದಾ ಹಂಚಿಕೊಳ್ಳುವುದು ಶ್ರೀಯುತರ ಬಹುದೊಡ್ಡ ಗುಣ. ಕಾರ್ಮಿಕ ಕಾನೂನುಗಳು ಮತ್ತು ಔದ್ಯೋಗಿಕ ಸಂಬಂಧಗಳನ್ನು ಪರಿಣಾಮಕಾರಿಯಾಗಿ ಅರ್ಥಮಾಡಿಕೊಂಡು, ನಿಭಾಯಿಸುವ ಸಾಮರ್ಥ್ಯವನ್ನು ಈಗಿನ ಮಾನವ ಸಂಪನ್ಮೂಲ ಅಧಿಕಾರಿಗಳಲ್ಲಿ ವೃದ್ಧಿಸುವ ಕಾಯಕದಲ್ಲಿ ಶ್ರೀಯುತರ ಪಾತ್ರ ಅಪಾರ. ಇವರ ಮಾರ್ಗದರ್ಶನದಲ್ಲಿ ತಮ್ಮ ವೃತ್ತಿ ಜೀವನದಲ್ಲಿ ರೂಪಿಸಿಕೊಳ್ಳುತ್ತಿರುವವರು ಅನೇಕರು.

ಮಾನವ ಸಂಪನ್ಮೂಲ ಕ್ಷೇತ್ರದ ಜ್ಞಾನ ರತ್ನವಾದ ಶ್ರೀಯುತ ಸಿ.ಕೆ. ಗೌಡ ಅವರಿಗೆ ಈ ನಮ್ಮ ಐದನೇ ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ ಕನ್ನಡ ಸಮ್ಮೇಳನ 2021 ರ ಶುಭ ಸಂದರ್ಭದಲ್ಲಿ ಶ್ರೀಯುತರಿಗೆ **"ಮಾನವ ಸಂಪನ್ಮೂಲ ಕ್ಷೇತ್ರದ ಹಿರಿಯ ಸಾಧಕ ಪ್ರಶಸ್ತಿ – 2021"** ನೀಡುತ್ತಾ ಸನ್ಮಾನಿಸುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಚಾರ. ಭಗವಂತ ಇವರಿಗೆ ಮತ್ತು ಇವರ ಕುಟುಂಬ ಸದಸ್ಯರಿಗೆ ಆರೋಗ್ಯ ಸುಖ–ಶಾಂತಿ ನೆಮ್ಮದಿ ಸಮೃದ್ಧಿಯನ್ನು ದಯಪಾಲಿಸಲೆಂದು ಎಲ್ಲ ಮಾನವ ಸಂಪನ್ಮೂಲ ವೃತ್ತಿನಿರತರ ಪರವಾಗಿ ಆಶಿಸುತ್ತೇವೆ.

**ಬಿ.ಸಿ. ಪ್ರಭಾಕರ್**
ಅಧ್ಯಕ್ಷರು–ಕರ್ನಾಟಕ ಮಾಲೀಕರ ಸಂಘ.
ವಕೀಲರು–ಬಿಸಿಪಿ ಅಸೋಸಿಯೇಟ್ಸ್
ಮತ್ತು ಸಮ್ಮೇಳನದ ಮಾರ್ಗದರ್ಶಕರು

**ರಮೇಶ ಎಂ.ಎಚ್.**
ಕಾರ್ಯದರ್ಶಿ,
ನಿರಾತಂಕ ಟ್ರಸ್ಟ್

ಕನ್ನಡ ಬಳಸಿ, ಕಲಿಸಿ ಮತ್ತು ಬೆಳೆಸಿ

www.hrkancon.com, www.niratanka.org